ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಇವರ ನ್ಯಾಯಾಲಯ, ಮೂಡಿಗೆರೆ.

ಸಿ.ಸಿ. ಸಂಖ್ಯೆ. **152/2024**

| | | |
|---|---|---|
| ಸಾಕ್ಷಿದಾರರ ಹೆಸರು | ಚೇತನ್ | ಸಿ.ಡಬ್ಲ್ಯೂ: 3 ಪಿ.ಡಬ್ಲ್ಯೂ: 3 |
| ತಂದೆಯ ಹೆಸರು | ಲೇಟ್ ಲಕ್ಷ್ಮಣಗೌಡ | |
| ವಯಸ್ಸು | 36 ವರ್ಷ | |
| ಉದ್ಯೋಗ | ವ್ಯವಸಾಯ | |
| ವಾಸ ಸ್ಥಳ | ಹಳೆಕೆರೆ ಗ್ರಾಮ, ಮೂಡಿಗೆರೆ ತಾ: | |

ದಿನಾಂಕ: 28.01.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ ಸ.ಸ.ಅ.ರವರಿಂದ:**

1. ಚಾಸಾ.1 ನನಗೆ ಗೊತ್ತು. ಚಾಸಾ.4 ನನಗೆ ಗೊತ್ತಿಲ್ಲ. ಈಗ ನಾನು ನೋಡುತ್ತಿರುವ ನಿ.ಪಿ.4 ಮತ್ತು ನಿ.ಪಿ.5 ರಲ್ಲಿ ಇರುವ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ಸಹಿಗಳನ್ನು ನಿ.ಪಿ.4(ಬಿ) ಮತ್ತು ನಿ.ಪಿ.5(ಬಿ) ಎಂದು ಗುರುತಿಸಲಾಯಿತು. ನಿ.ಪಿ.6 ಮತ್ತು 7 ಛಾಯಚಿತ್ರಗಳಲ್ಲಿ ನಾನು ಹಾಜರಿಲ್ಲ. ಈಗ ನಾನು ನೋಡುತ್ತಿರುವ ಸಾಕ್ಷಿದಾರರಿಗೆ ನೀಡಿದ ನೋಟೀಸಿನಲ್ಲಿ ನನ್ನ ಸಹಿ ಇರುತ್ತದೆ. ಸದರಿ ನೋಟೀಸನ್ನು ನಿ.ಪಿ.12 ಎಂದುಸಾಕ್ಷಿಯ ಸಹಿಯನ್ನು ನಿ.ಪಿ.12(ಎ) ಎಂದು ಗುರುತಿಸಲಾಯಿತು.

2. ಸದರಿ ದಾಖಲೆಗೆ ಸಹಿಯನ್ನು 2023 ರಲ್ಲಿ ಹಳೆಕೆರೆ ರಸ್ತೆಯಲ್ಲಿ ಮಾಡಿದ್ದೇನೆ. ರಸ್ತೆಯ ವಿಚಾರಕ್ಕೆ ಸಂಬಂಧಿಸಿದಂತೆ ಆ ಸಹಿಯನ್ನು ಮಾಡಿದ್ದೇನೆ. ಸಹಿಯನ್ನು ಚಾಸಾ.1 ರವರು ಪಡೆದಿದ್ದರು. ಸದರಿ ದಾಖಲೆಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಬೇರೆ ವಿಚಾರ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಸ.ಸ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**<u>ಪಾಟೀ ಸವಾಲು ಸ.ಸ.ಅ. ರವರಿಂದ</u>**

3. ದಿಃ 27.05.2023 ರಂದು ಬೆಳಿಗೆಗ 10.00 ರಿಂದ 11.00 ಗಂಟೆ ಸಮಯದಲ್ಲಿ ಚಾಸಾ.1 ರವರ ತೋಟದ ದನದ ಕೊಟ್ಟಿಗೆಯ ಬಳಿ ನಾನು ನಿ.ಪಿ.4 ಕ್ಕೆ ಸಹಿ ಮಾಡಿದ್ದೆ ಎಂದರೆ ಸರಿಯಲ್ಲ. ಚಾಸಾ.1 ರವರು ಸದರಿ ದನದ ಕೊಟ್ಟಿಗೆಯಲ್ಲಿ ತಾನು ಜಾನುವಾರನ್ನು ಕಟ್ಟಿ ಹಾಕಿದ್ದೆ ಅದನ್ನು ಯಾರೋ ಕಳವು ಮಾಡಿದ್ದಾರೆ ಎಂದು ಪೊಲೀಸರಿಗೆ ತಿಳಿಸಿದ್ದರು ಎಂದರೆ ಸರಿಯಲ್ಲ. ಪೊಲೀಸರು ಚಾಸಾ.1 ರವರು ಜಾನುವಾರು ಕಳವು ಆದ ವಿಚಾರವಾಗಿ ನೀಡಿದ ದೂರಿನ ಮೇರೆಗೆ ಸ್ಥಳ ಮಹಜರ್ ಮಾಡಲು ಬಂದಿದ್ದರು, ಆ ಸಮಯದಲ್ಲಿ ನಾನು ಮತ್ತು ಚಾಸಾ.4 ರವರು ಸಹಿ ಮಾಡಿದ್ದೆವು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಿ.ಪಿ.5 ಕರಡು ನಕ್ಷೆಗೆ ಸಹಿ ಮಾಡಿದ್ದೆ, ಪೊಲೀಸರು ನಿ.ಪಿ.12 ರಂತೆ ನೋಟೀಸು ಸಹ ನೀಡಿದ್ದರು ಎಂದರೆ ಸರಿಯಲ್ಲ. ನನಗೆ ಈ ಕೇಸಿನ ವಿಚಾರ ಎಲ್ಲಾ ತಿಳಿದಿದ್ದರು ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಶ್ರೀ ಹೆಚ್.ಕೆ.ಆರ್. ವಕೀಲರಿಂದ – 4 ನೇ ಆರೋಪಿತನ ಪರವಾಗಿ</u>

4. ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

<u>ಪಾಟೀ ಸವಾಲು ಶ್ರೀ ಟಿ.ಎ.ಕೆ. ವಕೀಲರ ಪರವಾಗಿ ಶ್ರೀ ಪಿ.ಕೆ. ವಕೀಲರಿಂದ – 1 ರಿಂದ 3 ನೇ ಆರೋಪಿತರ ಪರವಾಗಿ</u>

5. ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

**<u>ಮರು ವಿಚಾರಣೆಃ</u>** ಇಲ್ಲ

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ